# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1984**
ಮಾನ್ಯ ಸದಸ್ಯರ ಹೆಸರು : **ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)**
ಉತ್ತರಿಸುವ ದಿನಾಂಕ : **24.03.2026**
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಬಾಗಲಕೋಟೆ-ವಿಜಾಪುರ ಜಿಲ್ಲೆಯಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು; (ಜಿಲ್ಲೆ ಮತ್ತು ತಾಲ್ಲೂಕುವಾರು ಅಂಕಿ-ಅಂಶಗಳೊಂದಿಗೆ ಮಾಹಿತಿ ಒದಗಿಸುವುದು)</td><td>
ಭಾರತ ಸರ್ಕಾರದ ಉದ್ಯಮ್ ಪೋರ್ಟಲ್‌ನಲ್ಲಿ ಬಾಗಲಕೋಟೆ ಜಿಲ್ಲೆಯ ಒಟ್ಟು 48803 ಸಣ್ಣ ಕೈಗಾರಿಕೆಗಳು ನೋಂದಣಿಯಾಗಿವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.
<table>
<tr><td>1.</td><td>ಬಾದಾಮಿ</td><td>3973</td></tr>
<tr><td>2.</td><td>ಬಾಗಲಕೋಟೆ</td><td>16070</td></tr>
<tr><td>3.</td><td>ಬೀಳಗಿ</td><td>2725</td></tr>
<tr><td>4.</td><td>ಗುಳೇದಗುಡ್ಡ</td><td>1200</td></tr>
<tr><td>5.</td><td>ಹುನಗುಂದ</td><td>3123</td></tr>
<tr><td>6.</td><td>ಇಳಕಲ್</td><td>2422</td></tr>
<tr><td>7.</td><td>ಜಮಖಂಡಿ</td><td>4731</td></tr>
<tr><td>8.</td><td>ಮುಧೋಳ</td><td>6731</td></tr>
<tr><td>9.</td><td>ರಬಕವಿ ಬನಹಟ್ಟಿ</td><td>4504</td></tr>
<tr><td>10.</td><td>ತೇರದಾಳ</td><td>3324</td></tr>
<tr><td></td><td>ಒಟ್ಟು</td><td>48803</td></tr>
</table>
ವಿಜಯಪುರ ಜಿಲ್ಲೆಯಲ್ಲಿ ದಿನಾಂಕ:31.03.2025 ರ ಅಂತ್ಯದ ವರೆಗೆ ಒಟ್ಟು 50565 ಸಣ್ಣ ಕೈಗಾರಿಕೆಗಳು ಉದ್ಯಮ್ ಪೋರ್ಟಲ್‌ನಲ್ಲಿ ನೋಂದಣಿಯಾಗಿವೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.
<table>
<tr><td>1.</td><td>ವಿಜಯಪುರ</td><td>20729</td></tr>
<tr><td>2.</td><td>ಬಬಲೇಶ್ವರ</td><td>1734</td></tr>
<tr><td>3.</td><td>ತಿಕೋಟಾ</td><td>1478</td></tr>
<tr><td>4.</td><td>ಬಸವನ ಬಾಗೇವಾಡಿ</td><td>3993</td></tr>
<tr><td>5.</td><td>ಕೊಲ್ಹಾರ</td><td>1913</td></tr>
<tr><td>6.</td><td>ನಿಡಗುಂದಿ</td><td>2126</td></tr>
<tr><td>7.</td><td>ಮುದ್ದೇಬಿಹಾಳ</td><td>2787</td></tr>
<tr><td>8.</td><td>ತಾಳಿಕೋಟೆ</td><td>1469</td></tr>
<tr><td>9.</td><td>ಇಂಡಿ</td><td>5571</td></tr>
<tr><td>10.</td><td>ಚಡಚಣ</td><td>1570</td></tr>
<tr><td>11</td><td>ಸಿಂದಗಿ</td><td>4167</td></tr>
<tr><td>12</td><td>ದೇವರ ಹಿಪ್ಪರಗಿ</td><td>1912</td></tr>
<tr><td>13</td><td>ಆಲಮೇಲ</td><td>1116</td></tr>
<tr><td></td><td>ಒಟ್ಟು</td><td>50565</td></tr>
</table>
</td></tr>
</table>

| | | |
|---|---|---|
| (ಆ) | ಈ ಪೈಕಿ ಉತ್ತಮ ಸ್ಥಿತಿಯಲ್ಲಿರುವ ಸಣ್ಣ ಕೈಗಾರಿಕೆಗಳು ಯಾವುವು: (ಜಿಲ್ಲೆ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) | ಉತ್ತಮ ಸ್ಥಿತಿಯಲ್ಲಿರುವ ಸಣ್ಣ ಕೈಗಾರಿಕೆಗಳು ಎಂದು ಗುರುತಿಸಲು ಇಲಾಖೆಯಲ್ಲಿ ಯಾವುದೇ ನಿಯಮಾವಳಿಗಳು ಇರುವುದಿಲ್ಲ. ಆದ್ದರಿಂದ ಮಾಹಿತಿ ಇರುವುದಿಲ್ಲ. |
| (ಇ) | ಈ ಜಿಲ್ಲೆಗಳಲ್ಲಿ ರೋಗಗ್ರಸ್ತ ಸ್ಥಿತಿಯಲ್ಲಿರುವ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು: (ಹೆಸರುಗಳೊಂದಿಗೆ ತಾಲ್ಲೂಕುವಾರು ಅಂಕಿ-ಅಂಶಗಳೊಂದಿಗೆ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಜುಲೈ 2020 ರಿಂದ ಎಂ.ಎಸ್.ಎಂ.ಇ ಉದ್ಯಮಗಳ ನೋಂದಣಿಯನ್ನು ಭಾರತ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ಮಾಡಲಾಗುತ್ತಿದೆ.<br><br>ಸದರಿ ತಂತ್ರಾಂಶದಲ್ಲಿ ರೋಗಗ್ರಸ್ಥ ಕೈಗಾರಿಕೆಗಳ ಕುರಿತ ಮಾಹಿತಿ ಪಡೆಯುವ ವ್ಯವಸ್ಥೆ ಇಲ್ಲದೇ ಇರುವುದರಿಂದ ಮಾಹಿತಿ ಇರುವುದಿಲ್ಲ. |
| (ಈ) | ರೋಗಗ್ರಸ್ತ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸದರಿ ಕೈಗಾರಿಕೆಗಳ ಪುನಶ್ಚೇತನಕ್ಕೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು: (ವಿಸ್ತಾರವಾಗಿ ತಿಳಿಸುವುದು) | ಇಲಾಖೆಯಲ್ಲಿ ರೋಗಗ್ರಸ್ಥ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಪಡಿಸಲು ಕಾರ್ಯಕ್ರಮ/ ಯೋಜನೆಗಳು ಇರುವುದಿಲ್ಲ. ಆದುದರಿಂದ, ಸಣ್ಣ ಕೈಗಾರಿಕೆಗಳ ಪುನಶ್ಚೇತನಕ್ಕೆ ಸಾಲ ಪಡೆದ ಬ್ಯಾಂಕ್‌ಗಳಿಂದ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಕ್ರಮವಹಿಸಬಹುದಾಗಿದೆ.<br><br>ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂ: RBI/2015-16/338 FIDD.MSME & NFS.BC.No21/06.02.31/2015-16 March 17,2016 ರಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (MSME) ಪುನಶ್ಚೇತನ ಚೌಕಟ್ಟನ್ನು ಜಾರಿಗೆ ತಂದಿರುತ್ತದೆ.<br><br>ಸದರಿ ಸುತ್ತೋಲೆಯನ್ವಯ ಯಾವುದೇ ಎಂ ಎಸ್ ಎಂ ಇ ಘಟಕದ ಆಸ್ತಿಯು Non-Performing Asset (NPA) ಆಗುವ ಮೊದಲೇ ಸಾಲ ನೀಡಿರುವ ಬ್ಯಾಂಕ್‌ಗಳು ಆ ಘಟಕದ ಸಂಭವನೀಯ ಒತ್ತಡವನ್ನು ಗುರುತಿಸಿ ಖಾತೆಗಳನ್ನು Special Mention Account (SMA) ಅಡಿಯಲ್ಲಿ ಮೂರು ಉಪ-ವರ್ಗಗಳಾಗಿ ವಿಂಗಡಣೆ ಮಾಡಬೇಕು. ಅವುಗಳೆಂದರೆ;<br><br>1. SMA-0 (ಅಸಲು ಅಥವಾ ಬಡ್ಡಿ ಪಾವತಿ 30 ದಿನಗಳಿಗಿಂತ ಜಾಸ್ತಿ ವಿಳಂಬವಾಗದಿರುವ ವರ್ಗ)<br>2. SMA-2 (ಅಸಲು ಅಥವಾ ಬಡ್ಡಿ ಪಾವತಿ 31-60 ದಿನಗಳ ಅವಧಿಯಷ್ಟು ವಿಳಂಬವಾಗಿರುವ ವರ್ಗ)<br>3. SMA-3 (ಅಸಲು ಅಥವಾ ಬಡ್ಡಿ ಪಾವತಿ 61-90 ದಿನಗಳ ಅವಧಿಯಷ್ಟು ವಿಳಂಬವಾಗಿರುವ ವರ್ಗ)<br><br>ಮೇಲಿನ ಮುನ್ನೆಚ್ಚರಿಕೆಯನ್ನು ಆಧರಿಸಿ ಬ್ಯಾಂಕುಗಳು ಈ ಖಾತೆಯನ್ನು 'ಸರಿಪಡಿಸುವ ಕ್ರಿಯಾ ಯೋಜನೆ' ಕುರಿತಾದ ಸಮಿತಿಯ ಗಮನಕ್ಕೆ ತರಬೇಕು ಈ ಸಮಿತಿಯು ಸದರಿ ಘಟಕದ ಸಾಲದ ಖಾತೆಯನ್ನು ಪುನರ್ ಹಂಚಿಕೆ ಮಾಡುವ ಬಗ್ಗೆ ಸೂಕ್ತ ಸಲಹೆ/ಕ್ರಮಗಳನ್ನು ನೀಡುತ್ತದೆ. ಅದನ್ನು ಆಧರಿಸಿ ಘಟಕ ಮತ್ತು ಬ್ಯಾಂಕುಗಳು ಅವಶ್ಯ ಕ್ರಮವಹಿಸಬೇಕಾಗಿರುತ್ತದೆ. |
| (ಉ) | ಸದರಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ಕೈಗಾರಿಕೆಗಳ ಅಭಿವೃದ್ಧಿಗೆ ಮಂಜೂರಾದ | ಅನ್ವಯಿಸುವುದಿಲ್ಲ. |

| | | |
|---|---|---|
| | ಅನುದಾನವೆಷ್ಟು: ಪ್ರತಿವರ್ಷ ಖರ್ಚು ಮಾಡಿದ ಹಣವೆಷ್ಟು? | |

**ಸಿಐ 59 ಎಸ್‌ಎಸ್‌ಐ 2026**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು